CPMG\KA\BG.GPO - 13/2002

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ಪತ್ರಿಕೆ

| ಭಾಗ–IVA | ಬೆಂಗಳೂರು, ಗುರುವಾರ, ಅಕ್ಟೋಬರ್ ೩, ೨೦೦೨ (ಅಶ್ವಯುಜ ೧೧, ಶಕ ವರ್ಷ ೧೯೨೪) | ನಂ. ೧೩೬೮ |
|---|---|---|

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಮಮಆ:16ರಾಮಆ:2000, ಬೆಂಗಳೂರು, ದಿನಾಂಕ: 18ನೇ ಸೆಪ್ಟೆಂಬರ್ 2002**

ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ, 1995 (1995ರ ಕರ್ನಾಟಕ ಅಧಿನಿಯಮ 17)ರ 19ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ, ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗ ನಿಯಮಗಳು, 2002 ಎಂದು ಕರೆಯತಕ್ಕದ್ದು.

(2) ರಾಜ್ಯ ಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಅವು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) "ಅಧಿನಿಯಮ" ಎಂದರೆ, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ, 1995 (1995ರ ಕರ್ನಾಟಕ ಅಧಿನಿಯಮ 17);

(ಬಿ) "ಅಧ್ಯಕ್ಷರು" ಎಂದರೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು;

(ಸಿ) "ಸಮಿತಿ" ಎಂದರೆ ಅಧಿನಿಯಮದ 11ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸಮಿತಿ ಅಥವಾ ಸಮಿತಿಗಳು;

(ಡಿ) "ಸದಸ್ಯ" ಎಂದರೆ ಆಯೋಗದ ಸದಸ್ಯ ಮತ್ತು ಅದು ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಯನ್ನು ಒಳಗೊಳ್ಳುತ್ತದೆ;

(ಇ) "ಸ್ವಯಂ ಸೇವಾ ಸಂಸ್ಥೆ" ಎಂದರೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ17)ರ ಮೇರೆಗೆ ನೋಂದಾಯಿತವಾದ ಸ್ವಂತ ಸೇವಾ ಸಂಸ್ಥೆ.

**3. ಆಯೋಗದ ಸಭೆ.–** ಆಯೋಗದ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಭಾಗವು ಸಭೆಯ ಕೋರಂ ಆಗಿರತಕ್ಕದ್ದು. ಸಭೆಗೆ ಗೊತ್ತುಪಡಿಸಿದ ಸಮಯದಲ್ಲಿ ಕೋರಂ ಇಲ್ಲದಿದ್ದರೆ ಅಧ್ಯಕ್ಷರು ಮೂವತ್ತು ನಿಮಿಷ ಸಭೆಯನ್ನು ಮುಂದೂಡತಕ್ಕದ್ದು ಮತ್ತು ಅಂಥ ಅವಧಿಯೊಳಗೂ ಕೋರಂ ಇಲ್ಲದಿದ್ದ ಸಂದರ್ಭದಲ್ಲಿ, ಅಧ್ಯಕ್ಷರು ನಿರ್ಧರಿಸಬಹುದಾದಂಥ ತರುವಾಯದ ದಿನಾಂಕಕ್ಕೆ ಸಭೆಯನ್ನು ಮುಂದೂಡತಕ್ಕದ್ದು. ಮುಂದೂಡಲಾದ ಸಭೆಯಲ್ಲೂ ಕೋರಂ ಇಲ್ಲದಿದ್ದರೆ, ಹಾಗೆ ಮುಂದೂಡಲಾದ ಸಭೆಗೆ ಕೋರಂನ ಅವಶ್ಯಕತೆಯಿರತಕ್ಕದ್ದಲ್ಲ.

**4. ಸಭೆಯ ನೋಟೀಸು.–** ಸಭೆಯ ನೋಟೀಸನ್ನು, ಸಭೆಯ ದಿನಾಂಕಕ್ಕೆ ಕಡೇ ಪಕ್ಷ ಹತ್ತು ದಿನಗಳಿಗಿಂತ ಮುಂಚೆ ಸದಸ್ಯರಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಕಳುಹಿಸತಕ್ಕದ್ದು.

**5. ವಿಶೇಷ ಸಭೆ.–** 1) ಒಂದು ನಿರ್ದಿಷ್ಟ ವಿಷಯವನ್ನು ಸಭೆಗಳಲ್ಲಿ ಪರಿಣಾಮಕಾರಿಯಾಗಿ ಮತ್ತು ಸಾಕಷ್ಟು ಪರಿಗಣಿಸುವುದು ಸಾಧ್ಯವಾಗುವುದಿಲ್ಲವೆಂದು ಅಥವಾ ಅದು ತುರ್ತು ಸ್ವರೂಪದ್ದೆಂದು ಅಧ್ಯಕ್ಷರು ಪರಿಗಣಿಸಿದರೆ, ಅಧ್ಯಕ್ಷರು ಯಾರೇ ಸದಸ್ಯ\ಸದಸ್ಯರುಗಳ ಲಿಖಿತ ಮನವಿಯ ಮೇರೆಗೆ ಆ ವಿಷಯವನ್ನು ಪರಿಶೀಲಿಸಲು ಆಯೋಗದ ವಿಶೇಷ ಸಭೆಯನ್ನು ಕರೆಯಬಹುದು. ಆದಾಗ್ಯೂ, ಅಂತಹ ಸಭೆಯ ನೋಟೀಸನ್ನು ಸದಸ್ಯರಿಗೆ ಕಡೇ ಪಕ್ಷ ಮೂರು ದಿನಗಳಿಗಿಂತ ಮುಂಚಿತವಾಗಿ ಕಳುಹಿಸತಕ್ಕದ್ದು.

2) ಆಯೋಗವು, ಮಹಿಳೆಯರಿಗೆ ಸಂಬಂಧಪಟ್ಟ ನಿರ್ದಿಷ್ಟ ಸಮಸ್ಯೆಗಳಿಗೆ ಸಂಬಂಧಿಸಿದಂತೆ, ವಿಶೇಷ ತಜ್ಞರು ಅಥವಾ ತಜ್ಞರೊಂದಿಗೆ ಸಮಾಲೋಚಿಸಬಹುದು.

**6. ಸಭೆಯ ಕಾರ್ಯಸೂಚಿ.–** (1) ಸದಸ್ಯ ಕಾರ್ಯದರ್ಶಿಯು ಆಯೋಗದ ಸಭೆಗಳಿಗೆ ಕಾರ್ಯಸೂಚಿಯನ್ನು ಸಿದ್ಧಪಡಿಸತಕ್ಕದ್ದು. ಸದಸ್ಯರು ತರುವಾಯದ ಸಭೆಯ ಕಾರ್ಯಸೂಚಿಯಲ್ಲಿ ಯಾವುದೇ ನಿರ್ದಿಷ್ಟ ವಿಷಯವನ್ನು ಸೇರುಸುವಂತೆ ಸಲಹೆ ನೀಡಬಹುದು. ಕಾರ್ಯಸೂಚಿಗೆ ಸಂಬಂಧಪಟ್ಟ ಟಿಪ್ಪಣಿಗಳನ್ನು ಆಯೋಗದ ಕಛೇರಿಯು ಸಿದ್ದಪಡಿಸುವುದು.

(2) ಸಾಮಾನ್ಯವಾಗಿ, ಕಾರ್ಯಸೂಚಿಯ ಮೇಲಿನ ಟಿಪ್ಪಣಿಗಳೊಂದಿಗೆ ಸಭೆಯ ನೋಟೀಸನ್ನು ಮತ್ತು ಈ ಹಿಂದಿನ ಸಭೆಯ ನಡವಳಿಗಳ ಪ್ರತಿಗಳನ್ನು ಹತ್ತು ದಿನಗಳಿಗಿಂತ ಮುಂಚಿತವಾಗಿ ಸದಸ್ಯರಿಗೆ ಕಳುಹಿಸಿಕೊಡತಕ್ಕದ್ದು.

**7. ಆಡಳಿತಾತ್ಮಕ ಮತ್ತು ಹಣಕಾಸಿಗೆ ಸಂಬಂಧಪಟ್ಟ ಅಧಿಕಾರಗಳು.–** ಕಾರ್ಯದರ್ಶಿಯು, ಸರ್ಕಾರವು, ಕಾಲಕಾಲಕ್ಕೆ ಸಣ್ಣ ಇಲಾಖೆಯ ಮುಖ್ಯಸ್ಥರಿಗೆ ಪ್ರತ್ಯಾಯೋಜಿಸುವಂಥ ಆಡಳಿತಾತ್ಮಕ ಮತ್ತು ಹಣಕಾಸಿಗೆ ಸಂಬಂಧಪಟ್ಟ ಅಧಿಕಾರಗಳನ್ನು ಹೊಂದಿರತಕ್ಕದ್ದು.

**8. ಬಜೆಟ್, ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಆಯೋಗದ ಬಜೆಟ್ ಅನ್ನು, ಮುಂಬರುವ ವರ್ಷದ ನವೆಂಬರ್ 30ನೆ ದಿನಾಂಕಕ್ಕೆ ಮುಂಚೆ ಸಿದ್ದಪಡಿಸತಕ್ಕದ್ದು ಮತ್ತು ಸರ್ಕಾರದ ಅನುಮೋದನೆಗಾಗಿ ಅದನ್ನು ಪ್ರತಿ ವರ್ಷ ಡಿಸೆಂಬರ್ ಮೊದಲ ವಾರದ ಅವಧಿಯಲ್ಲಿ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು.

2) ಪ್ರತಿಯೊಂದು ಹಣಕಾಸು ಬಜೆಟ್ ಅನುದಾನಗಳ ಸಂಬಂಧದಲ್ಲಿ ಮಾಡಿದ ವೆಚ್ಚದ ಲೆಕ್ಕಪತ್ರಗಳ ವಿವರಪತ್ರವನ್ನು ಮತ್ತು ಆಯೋಗದ ಎಲ್ಲ ಲೆಕ್ಕ ಪತ್ರಗಳನ್ನು ಕರ್ನಾಟಕ ಆರ್ಥಿಕ ಸಂಹಿತೆಗನುಸಾರವಾಗಿ ಮತ್ತು ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ಸೂಚನೆಗಳಿಗನುಸಾರವಾಗಿ ನಿರ್ವಹಿಸತಕ್ಕದ್ದು.

3) ಆಯೋಗದ ವಾರ್ಷಿಕ ಹಣಕಾಸು ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಕರ್ನಾಟಕ ಮಹಾಲೇಖಪಾಲಕರಿಗೆ ಸಲ್ಲಿಸತಕ್ಕದ್ದು.

4) ಆಯೋಗವು, ಸರ್ಕಾರದ ಪೂರ್ವಾನುಮೋದನೆ ಪಡೆದು ಒಬ್ಬ ಚಾರ್ಟರ್ಡ್ ಅಕೌಂಟೆಂಟ್‌ರನ್ನು ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು ಆಯೋಗವು ನಿರ್ಧರಿಸಬಹುದಾದಷ್ಟು ಲೆಕ್ಕ ಪರಿಶೋಧನಾ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು.

5) ಆಯೋಗದ ಲೆಕ್ಕ ಪರಿಶೋಧನಾ ವರದಿಯನ್ನು ಅಧಿನಿಯಮದ 14ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

6) ಸರ್ಕಾರವು, ಆಯೋಗದ ವಿಶೇಷ ಅಥವಾ ಸಾಮಾನ್ಯ ಲೆಕ್ಕ ಪರಿಶೋಧನೆ ಮಾಡುವುದು ಅಗತ್ಯವೆಂದು ಅಭಿಪ್ರಾಯಪಟ್ಟರೆ, ಆಯೋಗದ ವಿಶೇಷ ಅಥವಾ ಸಾಮಾನ್ಯ ಲೆಕ್ಕ ಪರಿಶೋಧನೆ ಮಾಡುವಂತೆ ಆದೇಶಿಸುವುದು.

**9. ವಾರ್ಷಿಕ ವರದಿ.–** ಆಯೋಗವು, ಹಿಂದಿನ ವರ್ಷದ ಅವಧಿಯಲ್ಲಿ ಕೈಗೊಂಡ ತನ್ನ ಕಾರ್ಯ ಚಟುವಟಿಕೆಗಳು ಮತ್ತು ಕಾರ್ಯಪ್ರಗತಿಯ ಲೆಕ್ಕ ಪತ್ರಗಳ ಪೂರ್ಣ ವಿವರಗಳನ್ನು ನೀಡಿ ಆ ಹಣಕಾಸು ವರ್ಷವು ಮುಕ್ತಾಯವಾದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ನಮೂನೆ–ಎ ಯಲ್ಲಿ ಒಂದು ವಾರ್ಷಿಕ ವರದಿಯನ್ನು ಸಿದ್ದಪಡಿಸತಕ್ಕದ್ದು ಮತ್ತು ಅದನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

**ನಮೂನೆ–ಎ**

**ವಾರ್ಷಿಕ ವರದಿ**

**(ದಯವಿಟ್ಟು 9ನೇ ನಿಯಮವನ್ನು ನೋಡಿ)**

**ಕರ್ನಾಟಕ ರಾಜ್ಯ ಮಹಿಳಾ ಆಯೋಗ:**

1. ಅಧ್ಯಕ್ಷರು ಮತ್ತು ಸದಸ್ಯರ ವಿವರಗಳು
2. ಆಯೋಗದ ಪ್ರಕಾರ್ಯಗಳು
3. ಆಯೋಗದ ಅಧಿಕಾರಗಳು
4. ಹಿಂದಿನ ವರ್ಷದ ಅವಧಿಯಲ್ಲಿ ಕೈಗೊಂಡ ಕಾರ್ಯ ಚಟುವಟಿಕೆಗಳು / ಕಾರ್ಯಕ್ರಮಗಳು
5. ಪರಶೋಧಿತ ಲೆಕ್ಕಪತ್ರಗಳು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಹುಲಿಯಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ.